1 ನೇ ಪ್ರತಿವಾದಿಯು ಮ. ಅರ್ಜಿ ಸಂಖ್ಯೆ 2 ನ್ನು ಸಿಪಿಸಿ ಕಲಂ 151 ಅಡಿಯಲ್ಲಿ ಸಲ್ಲಿಸಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಿಸಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಅವಕಾಶವನ್ನು ಕೋರಿರುತ್ತಾರೆ. ವಾದಿ ಪರ ವಕೀಲರು ಸದರಿ ಅರ್ಜಿಗೆ ತಮ್ಮ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಅರ್ಜಿಗಳನ್ನು ಪರಿಶೀಲಿಸಲಾಗಿ ಅದರಲ್ಲಿ ಹೇಳಿದ ಕಾರಣಗಳಿಗಾಗಿ ಹಾಗೂ ನ್ಯಾಯದ ಹಿತದೃಷ್ಟಿಯಿಂದ ರೂ.200 ರಂತೆ ವಾದಿಗೆ ಪಾವತಿಸುವಂತೆ ನಿರ್ದೇಶಿಸಿ ಪುರಸ್ಕರಿಸಲಾಯಿತು.

ಪ್ರತಿವಾದಿಯು ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರವನ್ನು ಹಾಗೂ ಸದರಿ ಪ್ರತಿವಾದ ಪತ್ರದ ಸಂಗತಿಗಳನ್ನು ಮ.ಅ ಸಂಖ್ಯೆ 1 ಕ್ಕೆ ತಕರಾರನ್ನಾಗಿ ಅಳವಡಿಸಿಕೊಳ್ಳಲು ಅವಕಾಶ ಕೋರಿ ಸಲ್ಲಿಸಿದ ಮೆಮೋವನ್ನು ದಾಖಲೆಗಳ ಮೇಲೆ ತೆಗೆದುಕೊಳ್ಳಲಾಯಿತು.

ಮ.ಅ ಸಂಖ್ಯೆ 1 ರ ಮೇಲಿನ ಸುನಾವಣೆಗಾಗಿ ಮತ್ತು ಉಭಯ ಪಕ್ಷಗಾರರು ರಾಜೀ ಸಂಧಾನದ ಬಗ್ಗೆ ತಿಳಿಸುವಿಕೆಗಾಗಿ

Call On 13.12.2019

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ**
**ಕನಕಪುರ.**